# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 707

ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 12-07-2023

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಸಾರಿಗೆ ಸಂಸ್ಥೆಯಲ್ಲಿರುವ ಯಾವುದೇ ಒಂದು ವಾಹನವನ್ನು ಅನುಪಯುಕ್ತವೆಂದು ಘೋಷಿಸಲು ಇರುವ ಮಾನದಂಡಗಳೇನು; | ಸಾರಿಗೆ ಸಂಸ್ಥೆಗಳಲ್ಲಿ ವಾಸ್ತವಿಕವಾಗಿ ವಾಹನಗಳನ್ನು ಅನುಪಯುಕ್ತಗೊಳಿಸಲು ಅದರ ಭೌತಿಕ ಮತ್ತು ತಾಂತ್ರಿಕ ಅಂಶಗಳನ್ನು ಪರಿಗಣಿಸಿ, ಸುಸ್ಥಿತಿಯಲ್ಲಿರುವ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ಅಧಿಸೂಚನೆಯನ್ವಯ ಸರ್ಕಾರಿ ಸಾಮ್ಯದ ಸಂಸ್ಥೆಗಳ ವಾಹನಗಳಿಗೆ 15 ವರ್ಷ ಮಿತಿ ನಿಗಧಿಪಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯು ದಿನಾಂಕ: 01.04.2023ರಿಂದ ಜಾರಿಯಲ್ಲಿರುತ್ತದೆ. ಇದರನ್ವಯ ನೊಂದಣಿ ದಿನಾಂಕದಿಂದ 15 ವರ್ಷ ಹಾಗೂ ಮೇಲ್ಪಟ್ಟ ವಯೋಮಿತಿಯನ್ನು ಪೂರೈಸಿರುವ ವಾಹನಗಳ ರಹದಾರಿ/ ನೊಂದಣಿ ಪತ್ರಗಳು ಸ್ವಯಂ ರದ್ದುಗೊಳ್ಳುತ್ತಿರುವ ಕಾರಣ, ಅಂತಹ ವಾಹನಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ, ಅನುಪಯುಕ್ತಗೊಳಿಸಲಾಗುತ್ತಿದೆ.<br><br>ರಾಜ್ಯ ಹಾಗೂ ಕೇಂದ್ರ ಸರ್ಕಾರದ ನಿಯಮಗಳಲ್ಲಿ ಮಜಲು ವಾಹನಗಳಿಗೆ ಕಿ.ಮೀ. ಮಿತಿಯನ್ನು ನಿಗದಿಪಡಿಸಿರುವುದಿಲ್ಲ. ವಾಹನಗಳನ್ನು ಸುಸ್ಥಿತಿಯಲ್ಲಿರಿಸಿಕೊಳ್ಳಲು ಸೂಕ್ತ ನಿರ್ವಹಣಾ ಕ್ರಮಗಳನ್ನು ಕೈಗೊಂಡು, 15 ವರ್ಷಗಳವರೆಗೆ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>ಇದರೊಂದಿಗೆ ಪ್ರತಿ ವರ್ಷ ನಿಗಮದ ವಾಹನಗಳನ್ನು ವಾರ್ಷಿಕ ನವೀಕರಣಕ್ಕೆ ಒಳಪಡಿಸಿ ಪ್ರಾದೇಶಿಕ ಸಾರಿಗೆ ಇಲಾಖೆಯಿಂದ ಇವುಗಳ ಫಿಟ್‌ನೆಸ್ ಬಗ್ಗೆ ಅರ್ಹತಾ ಪತ್ರ ಪಡೆಯಲಾಗುತ್ತಿದೆ. ಹೆಚ್ಚಿನ ಕವಚ ದುರಸ್ತಿಗೆ |
| ಆ. | ಮಿತಿಗಿಂತ ಹೆಚ್ಚು ಕಿಲೋಮೀಟರ್‌ಗಳನ್ನು ಚಲಿಸಿರುವ ಬಸ್ಸುಗಳ ಸಂಖ್ಯೆ ಎಷ್ಟು; (ಜಿಲ್ಲಾ/ ಘಟಕವಾರು ವಿವರಗಳನ್ನು ಒದಗಿಸುವುದು) | |
| ಇ. | ನಿಗಧಿತ ಮಿತಿಗಿಂತ ಹೆಚ್ಚಿನ ಕಿಲೋಮೀಟರ್‌ಗಳನ್ನು ಚಲಿಸಲು ಕಾನೂನಿನಲ್ಲಿ ಅವಕಾಶವಿದೆಯೇ; ಹಾಗಿದ್ದಲ್ಲಿ, ಸಾರ್ವಜನಿಕರಿಗೆ ಇದರಿಂದ ತೊಂದರೆಯಾದಲ್ಲಿ, ಇದಕ್ಕೆ ಜವಾಬ್ದಾರರು ಯಾರು; ಹೆಚ್ಚು ಕಿಲೋಮೀಟರ್ ಚಲಿಸಿರುವ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಸರ್ಕಾರಕ್ಕಿರುವ ತೊಂದರೆ ಏನು; | |
| ಈ. | ಮಿತಿಗಿಂತ ಹೆಚ್ಚಿನ ಕಿಲೋ ಮೀಟರ್ ಚಲಿಸಿರುವ ಬಸ್ಸುಗಳನ್ನು ಸಾರ್ವಜನಿಕರ ಸಂಚಾರಕ್ಕೆ ಬಳಕೆ ಮಾಡಿಕೊಳ್ಳದಿರಲು ಸರ್ಕಾರವು ಯಾವುದಾದರೂ ಕ್ರಮ ಕೈಗೊಂಡಿದೆಯೇ? (ಪೂರ್ಣ ವಿವರ ಒದಗಿಸುವುದು) | |

| | | |
|---|---|---|
| | | ಬಂದಿರುವ ವಾಹನಗಳನ್ನು ಪ್ರಸ್ತುತ ಸಂಪೂರ್ಣವಾಗಿ ನವೀಕರಣಗೊಳಿಸಲಾಗುತ್ತಿದೆ (refurbishing). ದುಸ್ಥಿತಿಯಲ್ಲಿರುವ ವಾಹನಗಳು ದುರಸ್ತಿಗೆ ಲಾಭದಾಯಕವಲ್ಲದ ಪ್ರಕರಣಗಳಲ್ಲಿ ನಿಷ್ಕ್ರಿಯಗೊಳಿಸಲಾಗುತ್ತಿದೆ.<br><br>ಹೊಸ ವಾಹನಗಳನ್ನು ಅಗತ್ಯತೆಗನುಸಾರವಾಗಿ ವಾಹನ ಬಲಕ್ಕೆ ಸೇರ್ಪಡೆಗೊಳಿಸಲು ಯೋಜಿಸಲಾಗಿದೆ. |

ಸಂಖ್ಯೆ: ಟಿಡಿ 114 ಟಿಸಿಕ್ಯೂ 2023

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು